

# ಬದಲಾವಣೆಯ ಈ ಹೊತ್ತು

ತನ್ನಿಮಿತ್ತ



ಡಾ. ಗುರುರಾಜ ಪೋಶೆಟ್ಟಿಹಳ್ಳಿ
pranavapsg@gmail.com

**ಸಂಕ್ರಾಂತಿ ಸುಗ್ಗಿಯ ಹಬ್ಬ, ಜಾನಪದ ಕವಿ 'ಬೆಳಗಾಗಿ ನಾನೆದ್ದು ಯಾರ್‍ಯಾರ ನೆನೆಯಲಿ, ಎಳ್ಳು ಜೀರಿಗೆ ಬೆಳೆಯೋಳ ಭೂತಾಯಿ ಎದ್ದೊಂದು ಗಳಿಗೆ ನೆನೆದೇನು' ಎಂದು ಹಾಡಿರುತ್ತಾನೆ. ಹೀಗೆ ಎಳ್ಳು ಪ್ರಾತಃಸ್ಮರಣೀಯವಾದ ದ್ರವ್ಯ. ನಾಲ್ಕು ತಿಂಗಳಲ್ಲಿ ಕಟಾವಿಗೆ ಬರುವ ಈ ಬೆಳೆ ಮಳೆಗಾಲದಲ್ಲಿ ಬಿತ್ತಿದರೆ ಸಂಕ್ರಾಂತಿಗೆ ಬೇಕಾದಷ್ಟು ಧಾನ್ಯವನ್ನು ಕೊಡುತ್ತದೆ.**

ಸಂಕ್ರಾಂತಿ ಸಮೀಪಿಸಿತೆಂದರೆ ಎಲ್ಲರ ಮನೆಯಲ್ಲಿಯೂ ಎಳ್ಳು ಕೂಡಿಸುವ ಸಂಭ್ರಮ. ಭಾರತೀಯರ ಪ್ರತಿಯೊಂದು ಹಬ್ಬದಲ್ಲಿಯೂ ಕಾಲಕ್ಕೆ ತಕ್ಕಂಥ ವಿಶೇಷ ಆಚರಣೆಗಳಿವೆ. ಈ ಪದ್ಧತಿಗಳ ಹಿಂದೆ ಅಡಗಿರುವ ವೈಜ್ಞಾನಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ಅರ್ಥ ಮಾಡಿಕೊಂಡರೆ ಆಶ್ಚರ್ಯವೆನಿಸುತ್ತದೆ.

ಸಂಕ್ರಾಂತಿಯಲ್ಲಿ ಪ್ರಧಾನವಾಗಿ ಬಳಸುವ ಎಳ್ಳಿನ ಬಗ್ಗೆ ಈಗ ಸ್ವಲ್ಪ ಯೋಚಿಸೋಣ, ಎಳ್ಳು ನಮ್ಮ ಪ್ರಮುಖ ಬೆಳೆಯೂ ಹೌದು. ಎಳ್ಳೆಣ್ಣೆಯನ್ನು ತೆಗೆಯುವ ಹಲವು ಬೀಜಗಳಲ್ಲಿ ಅಂದಿನ ಕಾಲಕ್ಕೆ ಪ್ರಧಾನವಾದ ಬೀಜ ಇದಾಗಿತ್ತು. ಒಟ್ಟಿನಲ್ಲಿ ಸ್ನೇಹವೆಂದರೆ ಅಂಟಿಕೊಳ್ಳುವ ಗುಣ ಅಥವಾ ಎಣ್ಣೆಯ ಅಂಶವೆಂದು ಮುಖ್ಯವಾದ ಅರ್ಥ. ದಾಸರು ಒಂದು ಹಾಡಿನಲ್ಲಿ, 'ತೈಲಧಾರೆಯಂತೆ ಮನಸುಕೊಡು ಹರಿಯಲ್ಲಿ ಶಂಭೊ' ಎಂದು ಹಾಡಿದ್ದಾರೆ, ಎಣ್ಣೆಯ ಧಾರೆ ಹೇಗೆ ಕಡಿವಡೆಯದೆ ನಿರಂತರವಾಗಿರುತ್ತದೆಯೋ ಹಾಗೆ ಸಮಾಜದಲ್ಲಿ ಪ್ರೀತಿ, ಭಕ್ತಿ ಮತ್ತು ಸ್ನೇಹಗಳು ನಿರಂತರವಾಗಿರಬೇಕು. ಇದರ ಸಂಕೇತವೇ ಈ ಎಳ್ಳು. ಸ್ನೇಹವು ಹೇಗಿರಬೇಕೆಂದರೆ:

ಯಾರನ್ನಾದರೂ ನೋಡಿದರೆ, ಸ್ಪರ್ಶಿಸಿದರೆ, ಅವರ ಬಗ್ಗೆ ಕೇಳಿದರೆ, ಅವರೊಂದಿಗೆ ಮಾತನಾಡಿದರೆ, ಹೃದಯ ಕರಗಿ ಹೋಗುತ್ತದೆಯೊ ಅದೇ ಸ್ನೇಹ. ಇಂತಹ ಸ್ನೇಹದ ಸಂಕೇತ ಈ ಎಳ್ಳು. ಅದನ್ನು ಕುಟ್ಟಿದರೆ ಅದರ ಕಾಳುಗಳು ಒಂದಕೊಂದು ಅಂಟಿಕೊಳ್ಳುವವು, ಹಾಗೆಯೇ ಸ್ನೇಹವು ಎಡರು ತೊಡರುಗಳಲ್ಲಿ ಗಟ್ಟಿಗೊಳ್ಳಬೇಕು. ಎಳ್ಳಿನಲ್ಲಿರುವ ತೈಲವು ಬತ್ತಿಯ ಮೂಲಕ ಏರಿ, ದೀಪವನ್ನು ಬೆಳಗಿಸುವಂತೆ, ಸೇಹವು ಹೃದಯದಲ್ಲಿ ಪ್ರೇಮ ಜ್ಯೋತಿಯನ್ನು ಬೆಳಗಿಸಬೇಕು. ಸ್ನೇಹಕ್ಕಾಗಿ ಎಳ್ಳು ತನ್ನನ್ನೆ ಅರ್ಪಿಸಿಕೊಳ್ಳುವಂತೆ ನಾವು ಗೆಳೆಯರಿಗಾಗಿ ಸಿದ್ಧವಿರಬೇಕು.

ಎಳ್ಳು ಸುಗ್ಗಿಯ ಸಂಕೇತವೂ ಹೌದು. ಸಂಕ್ರಾಂತಿ ಸುಗ್ಗಿಯ ಹಬ್ಬ, ಜಾನಪದ ಕವಿ 'ಬೆಳಗಾಗಿ ನಾನೆದ್ದು ಯಾರ್‍ಯಾರ ನೆನೆಯಲಿ, ಎಳ್ಳು ಜೀರಿಗೆ ಬೆಳೆಯೋಳ ಭೂತಾಯಿ ಎದ್ದೊಂದು ಗಳಿಗೆ ನೆನೆದೇನು' ಎಂದು ಹಾಡಿರುತ್ತಾನೆ. ಹೀಗೆ ಎಳ್ಳು ಪ್ರಾತಃಸ್ಮರಣೀಯವಾದ ದ್ರವ್ಯ. ಬೇರೆ ಬೇರೆ ಬೀಜಗಳಿಂದ ಎಣ್ಣೆ ತೆಗೆದರೂ ಅವೆಲ್ಲವನ್ನೂ ತಿಲದ ಹೆಸರಿನಲ್ಲಿ ತೈಲವೆಂದೇ ಕರೆಯುತ್ತಾರೆಯೇ ಹೊರತು ತಿಲದ ಎಣ್ಣೆಯನ್ನು ಬೇರೆ ಹೆಸರಿನಿಂದ ಕರೆಯುವುದಿಲ್ಲ. ಎಣ್ಣೆಯ ಕಾಳುಗಳಾದ ಕಡಲೆಕಾಯಿ, ಹರಳು, ಸಾಸಿವೆ ಮುಂತಾದವುಗಳನ್ನು ತೈಲಧಾನ್ಯಗಳೆಂದೇ ಕರೆಯುತ್ತಾರೆ.

ಎಳ್ಳು ಚೀನಾ ಮತ್ತು ಇಂಡಿಯಾ ದೇಶಗಳಲ್ಲಿ ಬೆಳೆಯುವ ಪ್ರಮುಖ ಬೆಳೆ. ನಾಲ್ಕು ತಿಂಗಳಲ್ಲಿ ಕಟಾವಿಗೆ ಬರುವ ಈ ಬೆಳೆ ಮಳೆಗಾಲದಲ್ಲಿ ಬಿತ್ತಿದರೆ ಸಂಕ್ರಾಂತಿಗೆ ಬೇಕಾದಷ್ಟು ಧಾನ್ಯವನ್ನು ಕೊಡುತ್ತದೆ. ಇದರಲ್ಲಿ ಬಿಳಿ ಮತ್ತು ಕರಿ ಎಳ್ಳುಗಳೆಂಬ ಮುಖ್ಯ ಪ್ರಭೇದಗಳಿವೆ. ಉತ್ತರ ಮತ್ತು ಮಧ್ಯಪ್ರದೇಶಗಳಲ್ಲಿ ಬಿಳಿ ಎಳ್ಳು, ಒರಿಸ್ಸಾ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಕರಿ ಎಳ್ಳು ಹೆಚ್ಚಾಗಿ ಬೆಳೆಯುತ್ತದೆ. ಬಿಳಿಯ ಎಳ್ಳು ಹೆಚ್ಚಿನ ಎಣ್ಣೆಯ ಅಂಶವನ್ನು ಹೊಂದಿರುತ್ತದೆ. ಅದನ್ನೇ ನಾವು ಸಂಕ್ರಾಂತಿಯಲ್ಲಿ ಬಳಸುವುದು. ಕರಿಯ ಎಳ್ಳು ಪಿತೃಕಾರ್ಯಕ್ಕೆ ಶ್ರೇಷ್ಠವಾದುದು.



**ಎಳ್ಳಿನ ಎಣ್ಣೆಯಿಂದ ದೀಪ ಹಚ್ಚುವುದು, ಎಳ್ಳೆಣೆಯನ್ನು ಹಚ್ಚಿಕೊಂಡು ಸ್ನಾನ ಮಾಡುವುದು, ಎಳ್ಳನ್ನು ಹೋಮ ಮಾಡುವುದು, ದಾನ ಮಾಡುವುದು, ತಿನ್ನುವುದು ಮತ್ತು ಬಿತ್ತುವುದು, ಹೀಗೆ ಈ ಆರು ವಿಧಗಳಿಂದಲೂ ಎಳ್ಳನ್ನು ಬಳಸಿಕೊಳ್ಳುವವನು ನಾಶವಾಗುವುದಿಲ್ಲ. ಬಿಳಿಯ ಎಳ್ಳು ಹೆಚ್ಚಿನ ಎಣ್ಣೆಯ ಅಂಶವನ್ನು ಹೊಂದಿರುತ್ತದೆ. ಅದನ್ನೇ ನಾವು ಸಂಕ್ರಾಂತಿಯಲ್ಲಿ ಬಳಸುವುದು. ಕರಿಯ ಎಳ್ಳು ಪಿತೃಕಾರ್ಯಕ್ಕೆ ಶ್ರೇಷ್ಠವಾದುದು.**

ಪಿತೃಗಳಿಗೆ ಇದು ಪರಮ ಶ್ರೇಷ್ಠ ಭೋಜ್ಯವು. ಎಳ್ಳನ್ನು ಮಾಘಮಾಸದಲ್ಲಿ ದಾನ ಮಾಡುವವನು ನರಕವನ್ನು ನೋಡಬೇಕಾಗುವುದಿಲ್ಲ. ಅದು ಪುಷ್ಠಿ ಯನ್ನು ಕೊಡುತ್ತದೆ. ಮತ್ತು ರೂಪವನ್ನು ವರ್ಧಿಸು ತ್ತದೆ. ವೈಜ್ಞಾನಿಕವಾಗಿಯೂ ಎಳ್ಳಿನಲ್ಲಿ ಕೊಬ್ಬಿನ ಅಂಶ ಇರುವುದರಿಂದ ಅದು ಪುಷ್ಟಿಯನ್ನು ನೀಡುತ್ತದೆ. ಆದ್ದರಿಂದ ದೇಹ ಸೌಂದರ್ಯ ಹೆಚ್ಚುತ್ತದೆ. ಎಣ್ಣೆಯ ಅಂಶ ಚರ್ಮವನ್ನು ಆರೋಗ್ಯ ವಾಗಿಡುವುದು ನಮಗೆಲ್ಲಾ ಗೊತ್ತಿರುವ ವಿಷಯ. ಈ ಚಳಿಗಾಲದಲ್ಲಿ ವಾತಾವರಣದಲ್ಲಿ ತೇವಾಂಶ ಕಡಿಮೆ ಇರುವುದರಿಂದ ಚರ್ಮ ಒಡೆಯುತ್ತದೆ. ಎಳ್ಳು ಮತ್ತು ಉಳಿದ ಅದರ ಘಟಕಗಳು ಇದಕ್ಕೆ ಉತ್ತಮವಾದ ವಿರೋಧವನ್ನು ಒದಗಿಸುತ್ತವೆ. ಆದ್ದರಿಂದ ತಿಲವನ್ನು ನಾವು ತಿನ್ನಬೇಕು ಮತ್ತು ದಾನ ಮಾಡಬೇಕು.

ಸಂಕ್ರಮಣದಲ್ಲಿ ಎಳ್ಳಿನ ದಾನ ಅಕ್ಷಯವಾದ ಫಲವನ್ನು ಕೊಡುತ್ತದೆಂದು ಯಮನೇ ಹೇಳಿರುತ್ತಾನೆ. ಯಮದೂತರೂ ತಪ್ಪಿನಿಂದ ಒಬ್ಬ ಬ್ರಾಹ್ಮಣನನ್ನು ನರಕಕ್ಕೆ ಒಯ್ದಿದ್ದರು. ಯಮನು ಅವನನ್ನು ಸತ್ಕರಿಸಿ, ಅವನೊಡನೆ ಧರ್ಮಸಂವಾದ ನಡೆಸಿ ಹಿಂದಕ್ಕೆ ಕಳಿಸಿಕೊಡುತ್ತಾನೆ. ಈ ಸಂದರ್ಭದಲ್ಲಿ ತಿಲದಾನದ ಮಹತ್ವವು ವಿಶೇಷವಾಗಿ ಹೇಳಲ್ಪಡುತ್ತದೆ. ಎಳ್ಳಿನಿಂದ ಮಾಡಿದ ಗೋವನ್ನು ದಾನಮಾಡಿ, ಗೋದಾನದ ಫಲವನ್ನು ಪಡೆಯಬಹುದು. ಎಳ್ಳು ಬಹುವಿಧವಾದ ಉಪಯೋಗವನ್ನು ಹೊಂದಿದೆ. ಅದನ್ನು ಆರು ವಿಧವಾಗಿ ಬಳಸಬಹುದೆಂದು ಕೆಳಗಿನ ಶ್ಲೋಕ ಹೇಳುತ್ತದೆ.

ಎಳ್ಳಿನ ಎಣ್ಣೆಯಿಂದ ದೀಪ ಹಚ್ಚುವುದು, ಎಳ್ಳೆಣೆಯನ್ನು ಹಚ್ಚಿಕೊಂಡು ಸ್ನಾನ ಮಾಡುವುದು, ಎಳ್ಳನ್ನು ಹೋಮ ಮಾಡುವುದು, ದಾನ ಮಾಡುವುದು, ತಿನ್ನುವುದು ಮತ್ತು ಬಿತ್ತುವುದು, ಹೀಗೆ ಈ ಆರು ವಿಧಗಳಿಂದಲೂ ಎಳ್ಳನ್ನು ಬಳಸಿಕೊಳ್ಳುವವನು ನಾಶವಾಗುವುದಿಲ್ಲ. ಶನಿಗ್ರಹದ ಪೀಡಾ ಪರಿಹಾರಾರ್ಥವಾಗಿ ಎಳ್ಳಿನ ದೀಪ ಹಚ್ಚುವ ವಾಡಿಕೆಯಿದೆ. ಎಳ್ಳಿನ ದಾನವು ಪವಿತ್ರವೆಂದರೂ, ಬರಿಯ ಎಳ್ಳನ್ನು ದಾನವಾಗಿ ಯಾರೂ ಸ್ವೀಕರಿಸುವುದಿಲ್ಲ.

ಆನೆ, ಎಳ್ಳು ಮತ್ತು ಕಬ್ಬಿಣಗಳ ದಾನವನ್ನು ತೆಗೆದುಕೊಳ್ಳಬಾರದೆಂದು ಇಲ್ಲಿ ನಿಷೇಧಿಸಿದೆ. ಆದ್ದರಿಂದ ಬರಿಯ ಎಳ್ಳನ್ನು ದಾನ ಕೊಡಲು ಹೋದರೆ ಯಾರೂ ತೆಗೆದುಕೊಳ್ಳುವುದಿಲ್ಲ. ಅದಕ್ಕಾಗಿಯೇ ನಮ್ಮ ಹಿರಿಯರು ಉತ್ತರಾಯಣ ಪುಣ್ಯಕಾಲದಲ್ಲಿ ಈ ರೀತಿ ಎಳ್ಳನ್ನು ವಿನಿಮಯ ಮಾಡಿಕೊಳ್ಳುವ ಉಪಾಯವನ್ನು ಕಂಡುಕೊಂಡಿರು ತ್ತಾರೆ. ಎಳ್ಳಿನ ಜತೆಗೆ ಹುರಿದ ಕಡಲೆಕಾಯಿ, ಬೆಲ್ಲ, ಹುರಿಗಡಲೆ ಮತ್ತು ಕೊಬ್ಬರಿಯನ್ನು ಸೇರಿಸು ವುದರಿಂದ ಅದರ ಪುಷ್ಠಿ ಮತ್ತು ರುಚಿಗಳೆರಡೂ ಹೆಚ್ಚುತ್ತವೆ. ಈ ಐದನ್ನು ಸೇರಿಸಿ ಮಾಡಿದ ಎಳ್ಳನ್ನು ಪಂಚಕಜ್ಜಾಯವೆಂದೂ ಕರೆಯುತ್ತಾರೆ. ಗಣಪತಿಗೂ ಇದು ಪ್ರಿಯವಾದ ತಿನಿಸು.

ಎಳ್ಳಿನಲ್ಲಿರುವ ಕಡಲೆಕಾಯಿ ಮುಂತಾದವುಗಳ ವಿಷಯ ಹೆಚ್ಚು ಹೇಳದಿದ್ದರೂ ಬೆಲ್ಲದ ವಿಷಯ ಹೇಳಲೇಬೇಕು. ಎಳ್ಳಿನ ಜತೆ ಬೆಲ್ಲ ಒಳ್ಳೆಯ ಜೋಡಿ. ಸಕ್ಕರೆ ಅಚ್ಚಿನ ಚೂರುಗಳಾಗಲೀ, ಜೀರಿಗೆ ಪೆಪ್ಪರ ಮೆಂಟ್‌ಗಳಾಗಲೀ ಇದಕ್ಕೆ ಸರಿದೂಗಲಾರವು. ಎಳ್ಳಿನಲ್ಲಿ ಸ್ವಲ್ಪ ಒಗಚು ರುಚಿಯಿರುತ್ತದೆ. ಅದನ್ನು ಪ್ರತಿರೋಧಿಸಲು ಬೆಲ್ಲದ ಸವಿಯೇ ಬೇಕು. ಜತೆಗೆ ಎಳ್ಳು ಸ್ವಲ್ಪ ಪಿತ್ತಪ್ರಕೋಪವನ್ನು ಉಂಟು ಮಾಡಬಹುದು. ಕಡಲೆಕಾಯಿ ಮತ್ತು ಕೊಬ್ಬರಿ ಕೂಡ ಹಾಗೆಯೇ ಮಾಡುತ್ತವೆ. ಇವೆಲ್ಲ ದುಷ್ಪರಿಣಾಮ ಗಳನ್ನು ಕಡಿಮೆ ಮಾಡಿ, ಈ ತಿನಿಸನ್ನು ಸಂಪೂರ್ಣ ಆರೋಗ್ಯಕರವಾಗಿ ಮಾಡುವ ಒಂದೇ ಒಂದು ಘಟಕವೆಂದರೆ ಬೆಲ್ಲ.

ಹಿಂದಿನಿಂದಲೂ ಬೆಲ್ಲ ನಮ್ಮ ಗ್ರಾಮಗಳ ಗುಡಿ ಕೈಗಾರಿಕೆಯ ಉತ್ಪನ್ನ. ಯಾವುದೇ ರಾಸಾಯನಿಕ ವಸ್ತುಗಳ ಮಿಶ್ರಣವಿಲ್ಲದ ಸಂಪೂರ್ಣ ಸಾವಯವ ಆಹಾರ, ಸಕ್ಕರೆಯಲ್ಲಿ ಬಣ್ಣವನ್ನು ತೆಗೆಯಲು ಕೆಲವು ವಸ್ತುಗಳನ್ನು ಬಳಸುವುದುಂಟು. ಬೆಲ್ಲ ತನ್ನ ನೈಸರ್ಗಿಕ ಬಣ್ಣ ಮತ್ತು ರುಚಿಯನ್ನು ಉಳಿಸಿಕೊಂಡಿರುತ್ತದೆ. ಸಕ್ಕರೆಗಿಂತ ಮೃದುವಾಗಿಯೂ ಇದ್ದು, ಎಳ್ಳಿನೊಡನೆ ಹೊಂದಿಕೊಳ್ಳುತ್ತದೆ. 'ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತನಾಡು' ಎನ್ನುತ್ತಾರೆಯೇ ಹೊರತು ಎಳ್ಳು ಸಕ್ಕರೆ ಎನ್ನುವುದಿಲ್ಲ. ಬೆಲ್ಲ ತಂಪಾದ ಅನುಭವವನ್ನು ಕೊಡುವಂತೆ ಸಕ್ಕರೆ ಕೊಡುವುದಿಲ್ಲ. ಇಂದಿಗೂ ಹಳ್ಳಿಯ ಕಡೆ ರೈತರು ಬಿಸಿಲಿನಲ್ಲಿ ಕೆಲಸ ಮಾಡುವಾಗ ಬೆಲ್ಲದ ನೀರನ್ನು ಕುಡಿಯುತ್ತಾರೆ. ಮನೆಗೆ ಬಂದವರಿಗೂ ನೀರಿನ ಜತೆ ಬಾಯಾರಿಕೆಗೆ ಬೆಲ್ಲವನ್ನು ಕೊಡುತ್ತಾರೆ. ಬೆಲ್ಲದಲ್ಲಿ ನಾರಿನ ಅಂಶ, ಖನಿಜಾಂಶ ಮತ್ತು ಲವಣಗಳು ಸಕ್ಕರೆಗಿಂತ ಅಧಿಕವಾಗಿರುತ್ತವೆ. ಕಬ್ಬಿಣ, ಸುಣ್ಣ, ಪೊಟ್ಯಾಯಂ, ರಂಜಕ ಮುಂತಾದವು ಹೆಚ್ಚಾಗಿರುವುದರಿಂದ ಇದು ಸಕ್ಕರೆಗಿಂತ ನಿಧಾನವಾಗಿ ಜೀರ್ಣವಾಗಿ ರಕ್ತವನ್ನು ಸೇರುತ್ತದೆ. ಸಕ್ಕರೆ ಕಾಯಿಲೆ ಇರುವವರಿಗೂ ಸಕ್ಕರೆಗಿಂತ ಬೆಲ್ಲ ಕಡಿಮೆ ಅಪಾಯಕಾರಿ. ಆದ್ದರಿಂದ ಎಳ್ಳಿನ ಜತೆಗೆ ಬೆಲ್ಲವೇ ಸರಿಯಾದ ಜೋಡಿ. ಎಳ್ಳಿನಿಂದ ಮಾಡುವ ಚಿಗಳಿ, ಎಳ್ಳುಂಡೆ ಮುಂತಾದ ಖಾದ್ಯಗಳಿಗೂ ಬೆಲ್ಲವನ್ನೇ ಹಾಕುತ್ತಾರೆ. ಎಳ್ಳು ಬೆಲ್ಲ ಸೇರಿದ ಚಿಗಳಿಯನ್ನು ಋತುಮತಿಯಾದ ಹೆಣ್ಣುಮಕ್ಕಳಿಗೆ ತುಪ್ಪದ ಜತೆ ಆರೈಕೆಗೆ ಕೊಡುತ್ತಾರೆ. ಇದು ಸೊಂಟಕ್ಕೆ ಶಕ್ತಿಯನ್ನು ನೀಡುತ್ತದೆ.

ಸಂಕ್ರಾಂತಿಯಲ್ಲಿ ಹೀಗೆ ತಯಾರಿಸಿದ ಎಳ್ಳನ್ನು ಬಾಂಧವರಿಗೆ ಮತ್ತು ಸ್ನೇಹಿತರಿಗೆ ಹಂಚುವುದು ಮತ್ತೊಂದು ಸಡಗರ. ವರ್ಷಕ್ಕೊಮ್ಮೆಯಾದರೂ ಬಂಧುಗಳನ್ನು ಭೇಟಿ ಮಾಡಿ, ಕಷ್ಟಸುಖಗಳನ್ನು ಹಂಚಿಕೊಳ್ಳಲು ಇದೊಂದು ಸದಾವಕಾಶ. ಒಂದೇ ಊರು - ಕೇರಿಯಲ್ಲಿದ್ದರೂ, ಒಬ್ಬರನ್ನೊಬ್ಬರು ಸಂಧಿಸುವುದು ಮತ್ತು ಮಾತನಾಡುವುದು ಇತ್ತೀಚೆಗೆ ಅಪರೂಪವಾಗಿಬಿಟ್ಟಿದೆ. ಸಂಕ್ರಾಂತಿಯ ಎಳ್ಳು ಈ ವಿಷಯದಲ್ಲಿ ಸಂಪರ್ಕ ಸೇತುವೆಯಾಗಿ ಕೆಲಸ ಮಾಡುತ್ತದೆ.

ಎಳ್ಳಿನ ಜತೆಗೆ ಕಬ್ಬು, ಸಕ್ಕರೆ ಅಚ್ಚು ಮತ್ತು ಹಣ್ಣುಗಳನ್ನು ಹಂಚುತ್ತಾರೆ. ಕಬ್ಬು ಸುಗ್ಗಿಯ ಸಂಕೇತ. ಎಲ್ಲ ದೇವತೆಗಳ ಕೈಯಲ್ಲಿಯೂ ರಾಜಿಸುವ ವಿಶೇಷ ವಸ್ತುವಿದು. ಅದರ ಗಿಣ್ಣುಗಳಿಗೆ ಪರ್ವವೆಂದು ಹೆಸರು. ಹಬ್ಬಕ್ಕೂ ಸಂಸ್ಕೃತದಲ್ಲಿ ಪರ್ವವೆಂದೇ ಹೆಸರು, ಸಕ್ಕರೆ ಅಚ್ಚಿನಲ್ಲಿ ವಿವಿಧ ಆಕಾರಗಳನ್ನು ಮೂಡಿಸುವ ಕಲೆ ಈ ಸಮಯದಲ್ಲಿಯೇ ಅಭಿವ್ಯಕ್ತಗೊಳ್ಳಬೇಕು.

ಈ ಹಬ್ಬದಿಂದ ಮುಂದೆ ಸೂರ್ಯ ಉತ್ತರದ ಕಡೆಗೆ ಚಲಿಸುತ್ತಾನೆ. ದೇವತೆಗಳ ಹಗಲು ಪ್ರಾರಂಭವಾಗಿ ಮುಂದೆ ಶುಭಕಾರ್ಯಗಳಿಗೆ ಪ್ರಶಸ್ತವೆನಿಸುತ್ತದೆ. ಗೋಪೂಜೆಯೂ ಈ ಹಬ್ಬದ ಇನ್ನೊಂದು ವಿಶೇಷ. ನಮ್ಮ ಸುಖಜೀವನಕ್ಕೆ ಸಹಾಯವಾಗಿರುವ ಸೂರ್ಯ, ಗೋವು, ಬಂಧುಗಳು ಎಲ್ಲವನ್ನೂ ನೆನಪಿಗೆ ತಂದುಕೊಡುವ ವಿಶೇಷ ಅವಕಾಶವಿದು. ಹೀಗೆ ಸಂಕ್ರಾಂತಿ ನಮಗೆ ಇಹಪರಗಳೆರಡನ್ನೂ ಸಾಧಿಸುವ ವಿಶಿಷ್ಟ ಹಬ್ಬವಾಗಿದೆ.

# ಕನ್ನಡದ ಕಟ್ಟಾಳು ಪಾಟೀಲ್ ಪುಟ್ಟಪ್ಪ



ಸ್ಮರಣೆ

ಮಾರುತೀಶ್ ಅಗ್ರಾರ
maruthishagrara@gmail.com

ಜನಮಾನಸದಲ್ಲಿ 'ಪಾಪು ಎಂದೇ ಚಿರಪರಿಚಿತರಾಗಿದ್ದವರು ದಿವಂಗತ ಪಾಟೀಲ್ ಪುಟ್ಟಪ್ಪನವರು. ಅವರನ್ನು ಅನೇಕರು ನಡೆದಾಡುವ ವಿಶ್ವಕೋಶವೆಂದೇ ಕರೆಯುತ್ತಿದ್ದರು. ಸ್ವಾತಂತ್ರ್ಯ ಹೋರಾಟಗಾರರಾಗಿ, ಪತ್ರಕರ್ತರಾಗಿ, ಸಂಪಾದಕರಾಗಿ, ಕನ್ನಡ ಹೋರಾಟಗಾರರಾಗಿ, ಸಾಹಿತಿಯಾಗಿ, ವಕೀಲರಾಗಿ ಹೀಗೆ ಸಮಾಜದ ಎಲ್ಲಾ ರಂಗಗಳಲ್ಲೂ ತಮ್ಮ ಛಾಪು ಮೂಡಿಸಿದ ಹೆಗ್ಗಳಿಕೆ ಡಾ. ಪಾಟೀಲ ಪುಟ್ಟಪ್ಪನವರದ್ದು.ಪಾಟೀಲ್ ಪುಟ್ಟಪ್ಪನವರು ಹುಟ್ಟಿದ್ದು 1921ರ ಜನವರಿ 14ರಂದು. ಧಾರವಾಡದಲ್ಲಿ. ಅಂದಹಾಗೆ ಇಂದು ಪಾಪು ಅವರ ನೂರನೇ ಜನ್ಮ ದಿನ. ಕರ್ನಾಟಕದ ಏಕೀಕರಣಕ್ಕಾಗಿ ದುಡಿದ ಮಹನೀಯರ ಪೈಕಿ ಪಾಪು ಪ್ರಮುಖರು. ಕನ್ನಡದ ಉಳಿವಿಗಾಗಿ ಸರ್ವತೋಮುಖ ಬೆಳವಣಿಗೆಗಾಗಿ ಅವರು ಸಲ್ಲಿಸಿದ ಸೇವೆ ನಾಡಿನ ಇತಿಹಾಸದಲ್ಲಿ ಚಿರಸ್ಮರಣೀಯವಾಗಿ ಉಳಿದಿದೆ. ಅಂದಹಾಗೆ ಪಾಟೀಲ ಪುಟ್ಟಪ್ಪನವರು ತಮ್ಮ ಬದುಕಿನುದ್ದಕ್ಕೂ ಎಲ್ಲಿಯೂ ಸಹ ಕೃತಿಗೂ ವ್ಯಕ್ತಿತ್ವಕ್ಕೂ ಚ್ಯುತಿಯಾಗದಂತೆ ಬದುಕಿದವರು. ಪಾಪುರವರು ನೋಡುವುದಕ್ಕೆ ಎಷ್ಟು ಸೌಮ್ಯ ಸ್ವಭಾವದ ವ್ಯಕ್ತಿಯಾಗಿದ್ದರೋ ತಮ್ಮ ಚಿಂತನೆ ಹಾಗೂ ಅಭಿಪ್ರಾಯಗಳನ್ನು ಮಂಡಿಸುವಲ್ಲಿ ಅಷ್ಟೇ ನಿಷ್ಠುರವಾದಿಯೂ, ಕಠೋರವಾದಿಯೂ ಆಗಿದ್ದರು. ಸ್ಥಳ, ವೇದಿಕೆ ಯಾವುದಾದರೂ ಸರಿಯೇ ತಮಗನಿಸಿದ್ದನ್ನು ಮುಚ್ಚುಮರೆಯಿಲ್ಲದೆ ಸಮಾಜದ ಮುಂದೆ ಮಂಡಿಸುತ್ತಿದ್ದರು. ಅದು 2017ನೆ ಇಸವಿ. ಯಾದಗಿರಿಯಲ್ಲಿ 'ಕನ್ನಡ ನುಡಿ ಸಂಭ್ರಮ ಎಂಬ ಒಂದು ಕಾರ್ಯಕ್ರಮ ಆಯೋಜನೆಯಾಗಿತ್ತು. ಯಾವುದೇ ಕಾರ್ಯಕ್ರಮವಾದರೂ ಅಲ್ಲೊಂದು ಪ್ರಾರ್ಥನಾ ಗೀತೆ ಇದ್ದೇ ಇರುತ್ತದೆ. ಅದು ದೇವರ ಗೀತೆಯಾಗಿರಬಹುದು ಅಥವಾ ಭಕ್ತಿಗೀತೆಯಾಗಿರಬಹುದು ಅಂತಹ ಪ್ರಾರ್ಥನಾ ಗೀತೆ ಕಾರ್ಯಕ್ರಮಕ್ಕೊಂದು ಭೂಷಣವಿದ್ದಂತೆ. ಆದರೆ ಅಂದು ಆಯೋಜನೆಯಾಗಿದ್ದ ಕಾರ್ಯಕ್ರಮದಲ್ಲಿ ಪಾಪುರವರು ವಂದೇ ಮಾತರಂ ಗೀತೆಯನ್ನು ಹಾಡಿದರೆ ಮಾತ್ರ ನಾನು ಕಾರ್ಯಕ್ರಮ ಉದ್ಘಾಟಿಸುತ್ತೇನೆ ಎಂದುಬಿಟ್ಟರು! ಅಲ್ಲಿ ನೆರೆದಿದ್ದ ಅನೇಕರಿಗೆ ಒಂದುಕ್ಷಣ ಶಾಕ್ ಹೊಡೆದಂತಾಗಿಬಿಟ್ಟಿತು! ಆದರೆ ಪಾಪು ಮಾತ್ರ ತಮ್ಮ ಹಠದಿಂದ ಹಿಂದೆ ಸರಿಯಲಿಲ್ಲ. ವಂದೇ ಮಾತರಂ ಹಾಡಿದರೆ ಮಾತ್ರ ನಾನು ಕಾರ್ಯಕ್ರಮ ಉದ್ಘಾಟಿಸೋದು ಎನ್ನುವ ಮೂಲಕ ರಾಷ್ಟ್ರಾಭಿಮಾನ ಮೆರೆದಿದ್ದರು. ನಂತರ ಅಲ್ಲಿಯೇ ಇದ್ದ ಕೊಳಲುವಾದಕರೊಬ್ಬರು ವಂದೇ ಮಾತರಂ ಗೀತೆಯನ್ನು ತಮ್ಮ ಕೊಳಲಿನಲ್ಲಿ ನುಡಿಸಿ ಪಾಪುರವರ ಮನತಣಿಸಿದ್ದರು. ಮತ್ತೊಂದು ಕಾರ್ಯಕ್ರಮದಲ್ಲಿ ಆಯೋಜಕರು ಪಾಪುರವರಿಗೆ ಗೌರವ ಸೂಚಕವಾಗಿ ಮೈಸೂರು ಪೇಟ ತೊಡಿಸಲು ಮುಂದಾಗಿದ್ದರು. ಇದ್ದಕ್ಕಿದ್ದಂತೆ ಎದ್ದು ನಿಂತ ಪಾಪುರವರು ತಮ್ಮ ಕಣ್ಣುಗಳನ್ನು ಕೆಂಪಗೆ ಮಾಡಿ ನನಗೆ 'ಮೈಸೂರು ಪೇಟ ತೊಡಿಸಬೇಡಿ, ನಾನು ಸದಾ ಮೈಸೂರು ಅರಸರ ವಿರೋಧಿ ಎನ್ನುವ ಮೂಲಕ ಅಲ್ಲಿ ನೆರೆದಿದ್ದ ಹಾಗೂ ವೇದಿಕೆ ಮೇಲಿದ್ದವರಲ್ಲಿ ದಿಗ್ಭ್ರಾಂತಿ ಮೂಡಿಸಿದ್ದರು. ಅವರು ಮೈಸೂರು ಅರಸರನ್ನು ವಿರೋಧಿಸುತ್ತಿದ್ದಕ್ಕೆ ಕಾರಣವೇನು ಗೊತ್ತಾ? ಮೈಸೂರು ರಾಜರ ಆಡಳಿತದಲ್ಲಿ ಉತ್ತರ ಕರ್ನಾಟಕ ಹಾಗೂ ಇಂದಿನ ಕಲ್ಯಾಣ ಕರ್ನಾಟವನ್ನು ನಿರ್ಲಕ್ಷ್ಯದಿಂದ ನೋಡಿದ್ದ ಪರಿಣಾಮ ಆ ಭಾಗಗಳು ಅಭಿವೃದ್ಧಿಯಿಂದ ವಂಚಿತವಾಗಿ ಅನ್ಯಾಯಕ್ಕೆ ಒಳಗಾಗಿವೆ ಎಂಬುದು ಪಾಪುರವರಿಗೆ ಮೈಸೂರು ಅರಸರ ಮೇಲಿನ ಕೋಪಕ್ಕೆ ಕಾರಣವಾಗಿತ್ತು. ಹೀಗೆ ಪಾಪುರವರು ಅನೇಕ ವೇದಿಕೆಗಳಲ್ಲಿ ತಮಗನಿಸಿದ್ದನ್ನು ಮುಚ್ಚುಮರೆಯಿಲ್ಲದೇ ಮಾತನಾಡಿ ವಿರೋಧಿಗಳ ಕೆಂಗಣ್ಣಿಗೆ ಗುರಿಯಾಗಿದ್ದುಂಟು.ಆದರೆ ಎಂದಿಗೂ ಸಹ ತಮ್ಮ ತತ್ತ್ವ ಸಿದ್ಧಾಂತಗಳ ವಿರುದ್ಧವಾಗಿ ನಡೆಯಲಿಲ್ಲ. ಜತೆಗೆ ಇಂದಿನ ಕೆಲ ಸಾಹಿತಿಗಳ ರೀತಿ ರಾಜಕೀಯ ನಾಯಕರ ಹಿಂದೆ ಬಕೆಟು ಹಿಡಿದು ಓಡಾಡಿದ ಸಾಹಿತಿಯಲ್ಲ ಪಾಪು ಎಂಬುದು ಗಮನಾರ್ಹ.

## ಭಟ್ಟರ್ ಸ್ಕಾಚ್

**• ಪಿ.ಪಿ.ಶಾಂತಮೂರ್ತಿ, ಬೆಂಗಳೂರು**
ಭಟ್ರೇ, ರಾಜಕಾರಣಿಗಳ ಏಳಿಗೆಗೆ ಮಾಧ್ಯಮ ಬೇಕಲ್ಲವೇ?
**- ಆದರೂ ಮಾಧ್ಯಮಗಳ ಮುಂದೆ ಮಾತಾಡಬೇಡಿ ಎಂದು ಹೇಳುವುದ್ಯಾಕೋ?!**

**• ಜಿತೇಂದ್ರನಾಥ ಪಿ., ಸಾರಕ್ಕಿ**
ಭಟ್ರೇ, ಜನ ಸಾಮಾನ್ಯರು ತೃಪ್ತಿಯಿಂದ ಇರುವ ಕಾಲದಲ್ಲಿ ನಾವು ಬದುಕಿದ್ದೇವಾ?
**- ಜನಸಾಮಾನ್ಯರು ಹೇಗೋ ನೆಮ್ಮದಿ ಕಂಡುಕೊಳ್ಳುತ್ತಾರೆ... ರಾಜಕೀಯದಲ್ಲಿ ಮಾತ್ರ ಅತೃಪ್ತರಿರೋದು!**

**• ಪ್ರಭು ಗಣಾಚಾರಿ, ಸುರಪುರ**
ಭಟ್ರೇ, ಮುನಿರತ್ನ ಅವರನ್ನು ಮಂತ್ರಿ ಮಾಡದಿರಲು ಕಾರಣವೇನು?
**- ನಿನ್ನ ಪ್ರಶ್ನೆಯನ್ನು ದಿಲ್ಲಿ ನಾಯಕರಿಗೆ ಕಳಿಸಲಾಗಿದೆ!**

**• ವೆಂಕಟೇಶಮೂರ್ತಿ ಬಾಲೇನೂರು, ಮಂಡ್ಯ**
ಭಟ್ರೇ, ಸಚಿವ ಸ್ಥಾನ ಸಿಗಲಿಲ್ಲ ಎಂದು ರೇಣುಕಾಚಾರ್ಯ ಕಣ್ಣೀರು ಹಾಕಿದರಂತೆ?
**- ಮಾಜಿ ಸಚಿವ ಎಂಬ ಬಿರುದು ಶಾಶ್ವತ ಎಂಬುದನ್ನಾದರೂ ತಿಳಿದು ಸಮಾಧಾನಪಟ್ಟುಕೊಳ್ಳಲಿ!**

**• ಕಾಶೀಪತಿ ಕಿಲಾರ, ಬೆಂಗಳೂರು**
ಭಟ್ರೇ, ಸಂಕ್ರಾಂತಿಯನ್ನು ರಾಗಿಣಿ ಜೈಲಲ್ಲೇ ಕಳೆಯುತ್ತಾಳಂತೆ?
**- ಅಲ್ಲೇ ಅಡ್ಜಸ್ಟ್ ಆದ್ರೆ ಯುಗಾದಿಯನ್ನೂ ಕಳೆಯಬಹುದು!**

**• ಸಂಕೇತ ಕುಲಕರ್ಣಿ, ಹುಬ್ಬಳ್ಳಿ**
ಭಟ್ರೇ, ಏನೇ ಮಾಡಿದರೂ ಜನರಿಗೆ ಸಮಾಧಾನವಿಲ್ಲ?
**- ಹೂ ಕಣಪ್ಪ.. ಸಂಪುಟ ವಿಸ್ತರಿಸಿದರೂ ಕಷ್ಟ.. ವಿಸ್ತರಿಸದಿದ್ದರೂ ಕಷ್ಟ!**

**• ವಿನೋದ ನಾಯಕ, ಬೇಲೂರು**
ಭಟ್ರೇ, ಲಸಿಕೆ ವಿಷಯದಲ್ಲೂ ಕಾಂಗ್ರೆಸ್ಸಿನವರು ರಾಜಕೀಯ ಮಾಡ್ತಾರಲ್ಲ?
**- ಅದು ಇಟಲಿಯಿಂದ ಬಂದಿದ್ದರೆ ಹಾಗೆ ಮಾಡುತ್ತಿರಲಿಲ್ಲವೇನೋ ?!**

**• ನಾರಾಯಣ ಕೆ.ಭಾಗವತ, ಭದ್ರಾವತಿ**
ಭಟ್ರೇ, ಕಾಂಗ್ರೆಸ್ಸಿಗೆ ಡೈವೋರ್ಸ್ ಕೊಟ್ಟಿದ್ದೀನಿ, ಮತ್ತೆ ಹೋಗೋದಿಲ್ಲ ಎಂದು ಬಿ.ಸಿ.ಪಾಟೀಲ್ ಹೇಳಿದ್ದಾರಲ್ಲ?
**- ನಾಳೆ ಮಂತ್ರಿ ಪದವಿ ಕಿತ್ತಾಕಿದ ನಂತರವೂ ಇದೇ ಮಾತು ಹೇಳಿದರೆ ಈ ಮಾತನ್ನು ನಂಬಬಹುದೇನೋ?!**

**• ನೂತನ ಶೆಟ್ಟಿ, ಗಿರಿನಗರ**
ಭಟ್ರೇ, ನಾನು ಯಾರಿಗೂ ಹೆದರುವುದಿಲ್ಲ ಎಂದು ಡಿಕೆಶಿ ಹೇಳಿದ್ದಾರಲ್ಲ?
**- ಈ ಮಾತನ್ನು ಕೇಳಿದಾಗಲೆಲ್ಲ ಸಿಬಿಐ ಅಧಿಕಾರಿಗಳು ಬಂದು ಹೋಗಿ ಎಂದು ಕರೆಯಿಸಿಕೊಳ್ಳೋದು!**

**• ಯುವರಾಜ ಹಿರೇಮಠ, ಬೆಳಗಾವಿ**
ಭಟ್ರೇ, ಬೆಳಗಾವಿ ಜಿಲ್ಲೆಗೆ ಮತ್ತೊಬ್ಬ ಸಚಿವರಂತೆ?
**- ಎರಡನೆಯ ವಿಧಾನಸೌಧ ಕಟ್ಟಿಸಿದ್ದು ಸಾರ್ಥಕವಾಯಿತು?!**

# ಸಾಮಾಜಿಕ ಮಾಧ್ಯಮಗಳಲ್ಲಿ ಭಕ್ತರು ಮತ್ತು ಗುಲಾಮರು

ಅವಲೋಕನ



ಚಂದ್ರಶೇಖರ ಬೇರಿಕೆ
chandrashekharaberike@gmail.com

ಸಾಮಾಜಿಕ ಜಾಲತಾಣಗಳಲ್ಲಿ ಅತೀ ಹೆಚ್ಚು ಬಳಕೆ ಮತ್ತು ಚಲಾವಣೆಯಲ್ಲಿರುವ ಹೆಸರುಗಳ ಪೈಕಿ 'ಭಕ್ತರು ಮತ್ತು ಗುಲಾಮರು' ಎಂಬೆರಡು ನಾಮಾವಳಿಗಳು ವಿಶೇಷವಾಗಿ ಕಂಡು ಬರುತ್ತಿದ್ದು, ಭಾರತದಲ್ಲಿ ಇದೊಂದು ವಿಲಕ್ಷಣ ಬೆಳವಣಿಗೆ. ಭಕ್ತರು ಮತ್ತು ಗುಲಾಮರು ಎಂಬುದು ಎರಡು ರಾಜಕೀಯ ಪಕ್ಷಗಳ ಬೆಂಬಲಿಗರಾಗಿರುವವರು ಪರಸ್ಪರ ಟೀಕೆಗೆ, ಅವಹೇಳನಕ್ಕೆ ಇಟ್ಟುಕೊಂಡಿರುವ ಹೆಸರುಗಳು. ಹಾಗಾದರೆ ಇಲ್ಲಿ ಭಕ್ತರು ಮತ್ತು ಗುಲಾಮರು ಯಾರು ಎಂದರೆ ಬಿಜೆಪಿಯ ಸಮರ್ಥಕರು 'ಭಕ್ತರು' ಎಂದೆನಿಸಿ ಕೊಂಡರೆ ಕಾಂಗ್ರೆಸ್ ಪಕ್ಷದ ಸಮರ್ಥಕರು 'ಗುಲಾಮರು' ಎನಿಸಿಕೊಂಡರು. ಹಾಗಾಗಿ ಈ ಎರಡು ವರ್ಗಗಳನ್ನು ಅದೇ ಹೆಸರಿನಲ್ಲಿ ಯಥಾ ವತ್ತಾಗಿ ಉಲ್ಲೇಖಿಸಿ ಬರವಣಿಗೆ ಮುಂದುವರಿ ಸುವುದು ಸೂಕ್ತ ಎನಿಸುತ್ತದೆ.

ರಾಜಕೀಯ ಪಕ್ಷಗಳ ಬೆಂಬಲಿಗರ ನಡುವಿನ ಮಾರಾಮಾರಿ ಕೇವಲ ಭಾರತದಲ್ಲಿ ಮಾತ್ರ ಕಂಡು ಬರುವಂತದಲ್ಲ. ಜಗತ್ತಿನ ಮೂಲೆ ಮೂಲೆಗಳಲ್ಲೂ ಇಂತಹ ಘಟನೆಗಳು ಸಾಮಾನ್ಯವಾಗಿದ್ದು, ಆದರೆ ಭಾರತದಲ್ಲಿ ಸ್ವಲ್ಪ ಭಿನ್ನವಾಗಿ ಕಾಣಿಸಿಕೊಂಡಿದೆ. 'ಭಕ್ತರು ಮತ್ತು ಗುಲಾಮರು' ಎಂಬ ಹೆಸರುಗಳು ಬಿಜೆಪಿ ಮತ್ತು ಕಾಂಗ್ರೆಸ್ ಬೆಂಬಲಿಗರೊಂದಿಗೆ ಜೋಡಣೆಗೊಂಡಿದ್ದೇ ವಿಶೇಷ. ಬಿಜೆಪಿ, ಅದರಲ್ಲೂ ಪ್ರಧಾನಿ ನರೇಂದ್ರ ಮೋದಿಯವರ ಮೇಲೆ ಹೆಚ್ಚಿನ ಅಭಿಮಾನ, ನಿಷ್ಠೆ ವ್ಯಕ್ತಪಡಿಸಿದ್ದಕ್ಕಾಗಿ ಅವರ ಬೆಂಬಲಿಗರನ್ನು ಟ್ರೋಲ್ ಮಾಡಲು ಭಕ್ತರು ಎಂದು ಕರೆದಿರಬಹುದು ಮತ್ತು ಅದಕ್ಕೆ ಪ್ರತಿಯಾಗಿ ಕಾಂಗ್ರೆಸ್, ಅದರಲ್ಲೂ ವಂಶಾಡಳಿತಕ್ಕೆ ನಿಷ್ಠರಾಗಿ ಅಥವಾ ವಿಧೇಯರಾಗಿರುವ ಸಮೂಹವನ್ನು ಟ್ರೋಲ್ ಮಾಡಲು ಗುಲಾಮರು ಎಂದು ಕರೆದಿರಬಹುದು. ಇವೆರಡರಲ್ಲಿ ಮೊದಲನೆಯದಾಗಿ ಚಲಾವಣೆಯಾದ ಹೆಸರು ಯಾವುದು ಎಂಬುದು ತಿಳಿಯದು. ನರೇಂದ್ರ ಮೋದಿಯವರ ನೇತೃತ್ವದ ಸರಕಾರದ ಯಾವುದೇ ನಿರ್ಧಾರಗಳನ್ನು ಅಥವಾ ಹೇಳಿಕೆಗಳನ್ನು ಬಿಜೆಪಿಯ ಬೆಂಬಲಿಗರು ಸಮರ್ಥಿಸಿಕೊಂಡರೆ ಕಾಂಗ್ರೆಸ್ ನಾಯಕರು ಅದರಲ್ಲೂ ಗಾಂಧಿ ಪರಿವಾರದ ನಾಯಕರ ಯಾವುದೇ ನಿರ್ಧಾರ ಅಥವಾ ಹೇಳಿಕೆಗಳನ್ನು ಕಾಂಗ್ರೆಸ್ ಬೆಂಬಲಿಗರು ಸಮರ್ಥಿಸಿಕೊಳ್ಳುತ್ತಾರೆ. ತಮ್ಮ ನಾಯಕರ ನಿರ್ಧಾರಗಳು, ಹೇಳಿಕೆಗಳು ಸರಿಯೋ ಅಥವಾ ತಪ್ಪೋ ಎಂಬ ಬಗ್ಗೆ ಒಂದು ಕ್ಷಣ ಯೋಚಿಸಿ ವಿಮರ್ಶೆ ಮಾಡುವ ಗೋಜಿಗೂ ಹೋಗುವುದಿಲ್ಲ. ಕ್ಷಣ ಮಾತ್ರದಲ್ಲಿ ಪರ ಮತ್ತು ವಿರೋಧಕ್ಕೆ ಸಮರ್ಥನೆಗಳು, ಚರ್ಚೆಗಳು ಆರಂಭವಾಗುತ್ತವೆ. ಬಿಜೆಪಿಯ ಸಮರ್ಥಕರು ಭಕ್ತರು ಎಂದು ಕರೆಯಿಸಿಕೊಳ್ಳು ವುದರಲ್ಲೇ ಖುಷಿಪಟ್ಟರೆ ಕಾಂಗ್ರೆಸ್ ಸಮರ್ಥಕರಿಗೆ ಉಭಯ ಸಂಕಟ. ಅತ್ತ ಗುಲಾಮರು ಎಂದು ಕರೆಯಿಸಿಕೊಳ್ಳುವಂತೆಯೂ ಇಲ್ಲ, ಇತ್ತ ಹಾಗೆ ಕರೆಸಿಕೊಳ್ಳದೆ ವಿಧಿಯೂ ಇಲ್ಲ.



ಇತ್ತೀಚೆಗಿನ ದಿನಗಳಲ್ಲಿ ಸಾಮಾಜಿಕ ಜಾಲತಾಣವನ್ನು ಅತ್ಯಧಿಕವಾಗಿ ಆಕ್ರಮಿಸಿ ಕೊಂಡವರು ಭಕ್ತರು ಮತ್ತು ಗುಲಾಮರಾಗಿದ್ದು, ಅತೀ ಹೆಚ್ಚಿನ ಬಾರಿಗೆ ಟ್ರೆಂಡ್ ಆಗಿರುವ ಹ್ಯಾಶ್‌ಟ್ಯಾಗ್‌ಗಳ ಪೈಕಿ ಭಕ್ತ ಮತ್ತು ಗುಲಾಮ ಎಂಬ ಹೆಸರಿನ ಹ್ಯಾಶ್‌ಟ್ಯಾಗ್‌ಗಳೂ ಸೇರಿಕೊಂಡಿವೆ. ಈ ಹೆಸರುಗಳಲ್ಲಿ ಅತಿ ಭಯಂಕರ ವ್ಯಕ್ತಿಗತ ಟೀಕೆಗಳು, ಅವಹೇಳನಗಳು, ನಿಂದನಾತ್ಮಕ ಮತ್ತು ವ್ಯಕ್ತಿತ್ವಕ್ಕೆ ಅಪಚಾರ ಮಾಡುವಂಥ ಅದೆಷ್ಟೋ ಆಕ್ಷೇಪಾರ್ಹ ಪೋಸ್ಟ್‌ಗಳು ವಿನಿಮಯಗೊಂಡಿದ್ದು, ಭಕ್ತರಿಗೆ ಉತ್ತರವಾಗಿ ಗುಲಾಮರು ಮತ್ತು ಗುಲಾಮರಿಗೆ ಪ್ರತ್ಯುತ್ತರವಾಗಿ ಭಕ್ತರು ಈ ಪೋಸ್ಟ್‌ಗಳ ರೂವಾರಿಗಳು. ಇವುಗಳ ಪೋಷಕರು ರಾಜಕೀಯ ಪಕ್ಷಗಳು ಎಂಬುದು ನಿಸ್ಸಂಶಯ. ಇಂತಹ ಬೆಳವಣಿಗೆಗಳಿಂದಲೇ ರಾಜಕೀಯ ಪಕ್ಷಗಳ ಬೆಂಬಲಿಗರ ನಡುವೆ ಪರಸ್ಪರ ಗಲಾಟೆಗಳು, ಹೊಡೆದಾಟಗಳು ಸಾಮಾನ್ಯವಾಗಿಬಿಟ್ಟಿವೆ.

2014ರಿಂದ ಬಿಜೆಪಿಯ ನಾಗಾಲೋಟದ ಗೆಲುವು ಬಿಜೆಪಿ ಬೆಂಬಲಿಗರನ್ನು ಉತ್ತೇಜಿಸಿದರೆ ಕಾಂಗ್ರೆಸ್‌ನ ನಿರಂತರ ಸೋಲು ಕಾಂಗ್ರೆಸ್ ಬೆಂಬಲಿಗರನ್ನು ಹತಾಶೆಗೀಡು ಮಾಡಿರಬಹುದು. ಕೇಂದ್ರ ಸರಕಾರದ ಆಡಳಿತ ವೈಖರಿ ಮತ್ತು ಎಲ್ಲಾ ನಿರ್ಧಾರಗಳನ್ನು ಗುಲಾಮರು ವಿರೋಧಿಸುತ್ತಾರೆ. ಮೋದಿ ನಾಯಕತ್ವವನ್ನು ಅನ್ಯ ರಾಷ್ಟ್ರಗಳು, ಅಂತಾರಾಷ್ಟ್ರೀಯ ಸಂಸ್ಥೆಗಳು, ಸ್ವದೇಶಿ ಅಥವಾ ವಿದೇಶಿ ನಾಯಕರುಗಳು ಟೀಕಿಸಿದರೆ ಗುಲಾಮರು ಸಂತಸಗೊಳ್ಳುತ್ತಾರೆ. ಹಾಗೆಯೇ ನೋಟು ಅಮಾನ್ಯೀಕರಣ, ಜಿಎಸ್‌ಟಿ ಜಾರಿಯ ಸಮಯದಲ್ಲಾದ ಸ್ವಾಭಾವಿಕ ತೊಂದರೆಗಳು, ಅಂತಾರಾಷ್ಟ್ರೀಯ ರೇಟಿಂಗ್ ಸಂಸ್ಥೆಗಳ ರೇಟಿಂಗ್‌ನಲ್ಲಿ ಭಾರತದ ಆರ್ಥಿಕತೆಯ ಕುಸಿತದ ಉಲ್ಲೇಖದ ಬಗ್ಗೆ ಹಾಗೂ ಚುನಾವಣೆಯಲ್ಲಿ ಬಿಜೆಪಿ ಗೆಲುವಿನ ಕ್ರೆಡಿಟ್ ಇವಿಎಂಗೆ ಸಲ್ಲಬೇಕೆಂದು ಗುಲಾಮರು ಸಾಮಾಜಿಕ ಜಾಲತಾಣಗಳ ಮೂಲಕ ಅಬ್ಬರಿಸಿದರು. ಕೇಂದ್ರ ಸರಕಾರ ಜಾರಿ ಮಾಡಿರುವ ಕೃಷಿ ಮಸೂದೆಯ ವಿರುದ್ಧ ಪ್ರಸ್ತುತ ನಡೆಯುತ್ತಿರುವ ಹೋರಾಟದ ವಿಚಾರವನ್ನು ಮುಂದಿಟ್ಟುಕೊಂಡು ಟೀಕಿಸಲು ಗುಲಾಮರಿಗೆ ಸಿಕ್ಕ ಮತ್ತೊಂದು ಅವಕಾಶವಾಗಿದೆ. ಆದರೆ ನರೇಂದ್ರ ಮೋದಿಯವರ ಕಾರ್ಯ ವೈಖರಿ ಮತ್ತು ಆ ಪ್ರಕಾರವಾಗಿ ಕೇಂದ್ರ ಸರಕಾರ ತೆಗೆದುಕೊಂಡ ಇಲ್ಲಿವರೆಗಿನ ನಿರ್ಧಾರಗಳು ಹಾಗೂ ಕಾಂಗ್ರೆಸ್‌ನ ಇತ್ತೀಚೆಗಿನ ಸಾಲು - ಸಾಲು ಸೋಲುಗಳು ಭಕ್ತರು ಸಂಭ್ರಮಿಸುವಂತೆ ಮಾಡಿತ್ತು. ಪ್ರಧಾನಿ ಮೋದಿಯವರ ಜನ್ಮ ದಿನವನ್ನು ನಿರುದ್ಯೋಗಿ ದಿನ ಎಂದು ಗುಲಾಮರು ಆಚರಿಸಿದರೆ, ಸೋನಿಯಾ ಗಾಂಧಿಯವರ ಜನ್ಮ ದಿನವನ್ನು ಬಾರ್ ಡ್ಯಾನ್ಸರ್ ದಿನ, ಭ್ರಷ್ಟಾಚಾರ ವಿರೋಧಿ ದಿನ (ಕಾಕತಾಳೀಯ ಎಂಬಂತೆ ಡಿಸೆಂಬರ್ 9 ಸೋನಿಯಾ ಗಾಂಧಿಯವರ ಜನ್ಮ ದಿನವೂ ಹೌದು, ಭ್ರಷ್ಟಾಚಾರ ವಿರೋಧಿ ದಿನವೂ ಹೌದು), ರಾಹುಲ್ ಗಾಂಧಿ ಜನ್ಮ ದಿನವನ್ನು ಪಪ್ಪು ದಿನ, ಮೂರ್ಖರ ದಿನ ಎಂದು ಭಕ್ತರು ಆಚರಿಸಿದರು. ಈಗ ಹೊಸದಾಗಿ ಭಕ್ತರು ಮತ್ತು ಗುಲಾಮರ ಮಧ್ಯೆ ಕರೋನಾ ಲಸಿಕೆ ಮತ್ತು ರಾಮ ಮಂದಿರ ನಿಧಿ ಸಮರ್ಪಣಾ ಅಭಿಯಾನದ ವಿಚಾರವಾಗಿ ಪರಸ್ಪರ ಕಾದಾಟ ಆರಂಭವಾಗಿದೆ. ಕರೋನಾ ಲಸಿಕೆಯನ್ನು ಮೊದಲು ನರೇಂದ್ರ ಮೋದಿಯವರೇ ಹಾಕಿಸಿಕೊಳ್ಳಬೇಕು ಎಂಬುದು ಪ್ರತಿಪಕ್ಷಗಳು ಮತ್ತು ಗುಲಾಮರ ಕೂಗು. ಭಕ್ತರು ಮತ್ತು ಗುಲಾಮರ ನಡುವೆ ದೊಡ್ಡ ಕಂದಕ ಸೃಷ್ಟಿಯಾಗಲು ಸಾಮಾಜಿಕ ಜಾಲ ತಾಣಗಳ ವಿವೇಚನಾ ರಹಿತ ಬಳಕೆಯೇ ಕಾರಣ ಎಂದರೆ ತಪ್ಪಾಗಲಾರದು.

ದೇಶದಲ್ಲಿ ವೈಚಾರಿಕ ಭಿನ್ನಾಭಿಪ್ರಾಯಕ್ಕಿಂತಲೂ ಹೊರತಾದ ಟೀಕೆ ಟಿಪ್ಪಣಿಗಳು ಮೇಳೈಸುತ್ತಿದೆ. ಯಾವುದೇ ಪಕ್ಷದ ಬೆಂಬಲಿಗರು ಅಥವಾ ವಿಚಾರಧಾರೆಗಳ ಸಮರ್ಥಕರಾಗಿದ್ದರೂ ಸರಿಯಾದ ರೀತಿಯಲ್ಲಿ ಚಿಂತಿಸಿ, ವಿಮರ್ಶೆ ಮಾಡಿ ಪ್ರತಿಕ್ರಿಯಿಸುವ ಅಥವಾ ಸಮರ್ಥನೆ ಮಾಡಿಕೊಳ್ಳುವ ಬದಲು ಅವಿವೇಕಿಗಳಾಗಿ ಸಾಮಾಜಿಕ ಜಾಲ ತಾಣಗಳಲ್ಲಿ ವರ್ತಿಸುವುದು ಸ್ವೀಕಾರರಾರ್ಹವಲ್ಲ. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮನಸೋಇಚ್ಛೆ ಉಪಯೋಗಿಸಿಕೊಳ್ಳುವುದರಲ್ಲಿ ಭಾರತೀಯರೇ ಮುಂದು ಮತ್ತು ಇದು ಬೌದ್ಧಿಕ ದಿವಾಳಿತನ ಎಂದರೆ ತಪ್ಪಾಗಲಾರದು. ರಚನಾತ್ಮಕ ಟೀಕೆಗಳು ಸುಧಾರಣೆಯ ಅವಕಾಶವನ್ನು ಕಲ್ಪಿಸುತ್ತದೆ ಮತ್ತು ರಾಜಕೀಯ ಪಕ್ಷಗಳನ್ನು ಬಲಪಡಿಸುತ್ತದೆ ಎಂಬುದನ್ನು ಅರಿಯಲು ಪಕ್ಷದ ಮುಖಂಡರು ಮತ್ತು ಬೆಂಬಲಿಗರು ವಿಫಲರಾಗಿದ್ದಾರೆ. ಯಾವುದೇ ವಿಚಾರದ ಬಗ್ಗೆ ಪಕ್ಷದ ಅಗ್ರಪಂಕ್ತಿಯ ನಾಯಕರು ಒಮ್ಮೆ ಉಸುರಿದರೆ ನಂತರದ ಕೆಲಸವನ್ನು ಬೆಂಬಗಲಿಗರು ಮತ್ತು ಸಮರ್ಥಕರು ನಿಷ್ಠೆಯಿಂದ ಮಾಡುತ್ತಾರೆ ಎಂಬುದನ್ನು ಎಲ್ಲಾ ರಾಜಕೀಯ ಪಕ್ಷದವರು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ. ಅದಕ್ಕೆ ನಿದರ್ಶನ ಪ್ರಸ್ತುತ ಭಕ್ತರು ಮತ್ತು ಗುಲಾಮರ ನಡವಳಿಕೆಗಳು. ಇದು ನಿಜವಾಗಲೂ ಬೆಂಬಲಿಗರ ಅಪ್ರಬುದ್ಧತೆ ಮತ್ತು ಮುಗ್ಧತೆಯನ್ನು ದುರುಪಯೋಗಪಡಿಸಿಕೊಂಡಂತೆ. ದೇಶದೊಳಗೆ ರಾಜಕೀಯ ಭಿನ್ನಾಭಿಪ್ರಾಯಗಳು ಏನೇ ಇದ್ದರೂ ಅದನ್ನು ಅಭಿವ್ಯಕ್ತಿಗೊಳಿಸಲು ಅತ್ಯಂತ ಕೆಳ ಮಟ್ಟಕ್ಕೆ ಇಳಿಯುವುದು ಸೂಕ್ತವಲ್ಲ. ಆದರೆ ಭಾರತದಲ್ಲಿ ಇದೊಂದು ಅನಪೇಕ್ಷಿತ ಪ್ರವೃತ್ತಿಯಾಗಿದ್ದು, ಒಂದು ವರ್ಗ ಸಂಭ್ರಮಿಸಲೇ ಬೇಕು ಎಂದು ಸಂಭ್ರಮಿಸಿದರೆ ಇನ್ನೊಂದು ವರ್ಗ ವಿರೋಧ ಮಾಡಲೇ ಬೇಕು ಎಂದು ವಿರೋಧಿಸುವಂತಿದೆ.

ಸಾಮಾಜಿಕ ಮಾಧ್ಯಮಗಳ ಪೈಕಿ ಫೇಸ್‌ಬುಕ್‌ನಲ್ಲಿ ಅಸಭ್ಯ, ಅಪ್ರಬುದ್ಧ ಮತ್ತು ವಿವಾದಾತ್ಮಕ ಪೋಸ್ಟ್‌ಗಳು ಸಾಮಾನ್ಯವಾಗಿ ಕಂಡು ಬರುತ್ತಿದ್ದರೆ ಸಭ್ಯರು ಮತ್ತು ಪ್ರಬುದ್ಧರ ಸಾಮಾಜಿಕ ಮಾಧ್ಯಮವಾಗಿ ಟ್ವಿಟರ್ ಗುರುತಿಸಿಕೊಂಡಿತ್ತು. ಆದರೆ ಕೆಲವು ಅಧಿಕ ಪ್ರಸಂಗಿಗಳು ಈಗ ಟ್ವಿಟರ್‌ಗೂ ಲಗ್ಗೆಯಿಟ್ಟು ಅಲ್ಲೂ ಪಾರಮ್ಯ ಸಾಧಿಸಿದ್ದಾರೆ. ಲೋಪ ರಹಿತ ಶುದ್ಧ ಕನ್ನಡದಲ್ಲಿ ಬರೆಯಲು ಗೊತ್ತಿಲ್ಲದವರೂ ಸಾಮಾಜಿಕ ಮಾಧ್ಯಮಗಳಲ್ಲಿ ಟೀಕೆ ಟಿಪ್ಪಣಿ ಮತ್ತು ಲೇವಡಿಗಳಲ್ಲಿ ತೊಡಗಿಸಿಕೊಂಡು ಕನ್ನಡವನ್ನು ಇನ್ನಷ್ಟು ಕುಲಗೆಡಿಸಿದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲಿ ಫಾಲೋವರ್‌ಗಳ ಸಂಖ್ಯೆಯನ್ನು ಹೆಚ್ಚಿಸಿಕೊಂಡು ಲೈಕ್ಸ್‌ಗಳನ್ನು ಪಡೆಯುವ ಸಲುವಾಗಿ ಮನ ಬಂದಂತೆ ಅಭಿವ್ಯಕ್ತಿಗೊಳಿಸಲಾಗುತ್ತಿದೆ. ಇದರಿಂದ ಅಭಿವ್ಯಕ್ತಿ ಸ್ವಾತಂತ್ರ್ಯ ಎಂಬ ವ್ಯಾಖ್ಯೆಗೆ ಅರ್ಥವೇ ಇಲ್ಲದಂತಾಗಿದೆ. ಭ್ರಷ್ಟರು, ಸಮಾಜ ಬಾಹಿರ ವ್ಯಕ್ತಿಗಳು ಮುಂತಾದವರ ಪರ ವಕಾಲತ್ತು ವಹಿಸುವುದು ಸಾಮಾನ್ಯವಾಗಿದ್ದು, ಇದು ಭ್ರಷ್ಟರನ್ನು ಇನ್ನಷ್ಟು ಭ್ರಷ್ಟತೆಗೆ ಪೋಷಿಸಿದಂತಾಗುತ್ತದೆ. ಯಾವುದೇ ಮಹತ್ವದ ವಿಚಾರಗಳು ವಿಷಯಾಂತರಗೊಳ್ಳುತ್ತಿರುವುದು ಸಾಮಾಜಿಕ ಮಾಧ್ಯಮಗಳಿಂದಲೇ ಎಂದರೆ ತಪ್ಪಾಗಲಾರದು. ಸರಿ ತಪ್ಪುಗಳನ್ನು ವಿಮರ್ಶೆ ಮಾಡುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳದೇ ತಮ್ಮ ನಾಯಕರ ಪರ ವಕಾಲತ್ತು ವಹಿಸುವುದರಿಂದ ರಾಷ್ಟ್ರೀಯ ಹಿತಾಸಕ್ತಿ ಕಡೆಗಣನೆ ಆಗುತ್ತಿದೆ ಮತ್ತು ಭಾರತದ ನೈಜ ಸಮಸ್ಯೆಗಳು ಆದ್ಯತೆಯನ್ನು ಕಳೆದುಕೊಂಡಿದೆ. ಸಮರ್ಥನೆಯ ಭರದಲ್ಲಿ ವೈಚಾರಿಕತೆ ದಿವಾಳಿಯಾಗುತ್ತಿದೆ ಮತ್ತು ಜನತೆ ವಿಚಾರ ಶೂನ್ಯರಾಗುತ್ತಿರುವುದನ್ನು ಮೈ ಮರೆತಿದ್ದಾರೆ. ವಿವೇಚನೆ ಇಲ್ಲದ ನಡವಳಿಕೆಯಿಂದಾಗಿ ರಾಜಕೀಯ ನಾಯಕರು ಜನರನ್ನು ಯಥೇಚ್ಛವಾಗಿ ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ.

ಭಾರತ ವಿವಿಧತೆಯಲ್ಲಿ ಏಕತೆಯನ್ನು ಹೊಂದಿದ ದೇಶ ಎನ್ನುವುದನ್ನು ಹಿಂದಿನಿಂದಲೂ ನಿರೂಪಿಸಿಕೊಂಡು ಬಂದಿರುವ ರಾಷ್ಟ್ರ. ಇಲ್ಲಿ ಯಾರು ಸರಿ, ಯಾರು ತಪ್ಪು ಎನ್ನುವುದಕ್ಕಿಂತಲೂ ಯಾವುದು ಸರಿ, ಯಾವುದು ತಪ್ಪು ಎಂಬ ಬಗ್ಗೆ ಚರ್ಚೆ ಯಾಗಬೇಕು. ಒಳ್ಳೆಯದು ಮತ್ತು ಕೆಟ್ಟದ್ದು ಎರಡೂ ನಮ್ಮೊಳಗಿದ್ದು, ಯಾವುದನ್ನು ಹೆಚ್ಚು ಉಪಯೋಗಿಸು ವೆಯೋ ಅದು ಬೆಳೆಯುತ್ತಾ ಹೋಗುತ್ತದೆ. ಹಾಗೆಯೇ ಮೌಲ್ಯಗಳು ಇರುವುದು ನಮ್ಮ ವ್ಯಕ್ತಿತ್ವದಲ್ಲೇ ಹೊರತು ವಿವೇಕತನವನ್ನು ಬಲಿ ಕೊಡುವುದರಲ್ಲಿ ಅಲ್ಲ. ದೇಶದಲ್ಲಿ ಆಂತರಿಕ ಭಿನ್ನಾಭಿಪ್ರಾಯಗಳಿಂದ ಮತ್ತು ರಾಜಕೀಯ ಸಮರಗಳಿಂದಲೇ ನಾವು ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿ ಸಾಧಿಸಲು ಸಾಧ್ಯವಾಗುತ್ತಿಲ್ಲ. ವೈಚಾರಿಕಾ ಭಿನ್ನಾಭಿಪ್ರಾಯ ಏನೇ ಇದ್ದರೂ ಅದನ್ನು ಸೂಕ್ತ ರೀತಿಯಲ್ಲಿ ಅಭಿವ್ಯಕ್ತಿಗೊಳಿಸಬೇಕು. ಬಿಜೆಪಿಯ ಬೆಂಬಲಿಗರು ಭಕ್ತರು ಮತ್ತು ಕಾಂಗ್ರೆಸ್ ಬೆಂಬಲಿಗರು ಗುಲಾಮರು ಎಂಬ ಹೆಸರಿನಲ್ಲಿ ಕಚ್ಚಾಡಿಕೊಳ್ಳುತ್ತಿರುವುದು ಕೆಟ್ಟ ಸಂಪ್ರದಾಯ. ಈ ರಾಜಕೀಯ ಮೇಲಾಟದಲ್ಲಿ ಅದೆಷ್ಟೋ ಸ್ನೇಹ ಸಂಬಂಧಗಳು ಹಾಳಾಗಿವೆ. ಅಂತಿಮವಾಗಿ ಉಳಿಯುವುದು ಮನುಷ್ಯ ಸಂಬಂಧಗಳೇ ಹೊರತು ರಾಜಕೀಯ ಸಂಬಂಧಗಳಲ್ಲ. ರಾಜಕೀಯ ನಾಯಕರನ್ನು ಮೆಚ್ಚಿಸಲಿಕ್ಕಾಗಿ ಸ್ವಾಭಿಮಾನವನ್ನು ಬಲಿ ಕೊಟ್ಟು ಪ್ರಜ್ಞಾಹೀನರಂತೆ ವರ್ತಿಸುವುದು ದುರದೃಷ್ಟಕರ.